# 76

# ಜೀವನ ಸಮುದ್ರದಲ್ಲಿ ಪ್ರಯಾಣ

# (27:1-21)

ಅಧ್ಯಾಯ 27 ಒಂದು ಗುರುತರ ಕಾರ್ಯವನ್ನು ಮಾಡಿರುತ್ತದೆ. ವಾರಗಳ ಪ್ರಯಾಣವು ಹಲವಾರು ತಿಂಗಳುಗಳ ಸಮಯವನ್ನು ತೆಗೆದುಕೊಂಡರೂ - ಆದು ಬೋರ್ಗರೆವ ಸಮುದ್ರದ ಹಡಗು ಅಪಘಾತದ ಹಾಗೂ ಸೂಕ್ಷ್ಮವಾಗಿ ತಪ್ಪಿಸಿಕೊಂಡ ಸಮುದ್ರ ಪ್ರಯಾಣವೇ ಆಗಿತ್ತು.[1]

ಈ ದೃಷ್ಟಾಂತವನ್ನು ದಾಖಲಿಸುವಲ್ಲಿ ಲೂಕನ ಉದ್ದೇಶವಾದರೂ ಏನು? ಲೂಕನು ಸುಂದರವಾದ ಕಥೆಯನ್ನು ಇಷ್ಟಪಡುತ್ತಿದ್ದನು, ಆದಾಗ್ಯೂ ಕ್ಲುಪ್ತವಾಗಿ ಪದಗಳನ್ನು ಈ ಬರಹಗಾರನಿಗೆ, ಈ ಕಥೆಯನ್ನು ಬಣ್ಣಿಸುವಲ್ಲಿ ಸಾರ್ಥಕವಾಯಿತು. ಈ ಪುಸ್ತಕದ ಕಡೇ ಭಾಗದಲ್ಲಿ ಲೂಕನ ಮೂಲ ಉದ್ದೇಶವನ್ನು ತಿಳಿಯುತ್ತೇವೆ: ಇದರಲ್ಲಿ ಪೌಲನು ರೋಮಾಯಕ್ಕೆ ತಲುಪಿದ ಸಾರಾಂಶವು ಒಳಗೊಂಡಿರುತ್ತದೆ. "ಹಾಗೂ ಪೌಲನು ರೋಮಾಯವನ್ನು" ತಲುಪಿದ ವಿಚಾರವು ಒಂದು ಅಂಶವಾದರೆ, "ಪೌಲನು ರೋಮಾಯಕ್ಕೆ ಹೋಗದಂತೆ ಸೈತಾನನು ಹೇಗೆ ತಡೆದನು ಎಂಬ ಮತ್ತೊಂದು ಅಂಶವೂ ಪ್ರಮುಖವಾಗಿದೆ."

ಪೌಲನು ಥೆಸಲೋನಿಕದವರಿಗೆ ಬರೆಯುವಾಗ, "ಸಹೋದರರೇ, ... ನಿಮ್ಮ ಮುಖವನ್ನು ನೋಡುವದಕ್ಕೆ ಅತ್ಯಾಶೆಯಿಂದ ಇದ್ದರೂ ... *ನಾನು ಒಂದೆರಡು ಸಾರಿ ಬರುವದಕ್ಕಿದ್ದೆನು*; ಆದರೆ ಸೈತಾನನು ನಮಗೆ ಅಭ್ಯಾಂತರ ಮಾಡಿದನು" (1 ಥೆಸಲೋನಿಕ 2:17, 18; ಒತ್ತಿ ಹೇಳಿದ್ದು ನನ್ನದು). ಪೌಲನು ಥೆಸಲೋನಿಕಕ್ಕೆ ಹೋಗದಂತೆ ಕೆಲವು ಯೆಹೂದ್ಯರು ತಡೆ ಹಿಡಿದಿದ್ದರು, ಮತ್ತು ಸರಿಯಾದ ವಾತಾವರಣವು ಸಹ ಇರಲಿಲ್ಲ, ಮತ್ತು ಅದು ದೂರ ಪ್ರಯಾಣವು ಸಹ ಆಗಿತ್ತು - ಆದರೆ ಅವುಗಳೆಲ್ಲವು ಸೈತಾನನು ಅವನನ್ನು ತಡೆಯಲು ಬಳಸಿದ್ದ ಸಾಧನಗಳಾಗಿದ್ದವು.

ಪೌಲನು ಥೆಸಲೋನಿಕಕ್ಕೆ ಹೋಗಲು ಸೈತಾನನು ಆಡಚಣೆ ಉಂಟುಮಾಡಿದ್ದರೆ ಅವನು ರೋಮಾಯಕ್ಕೆ ಹೋಗಲು ಎಷ್ಟೋ ಅಡಚಣೆ ಉಂಟು ಮಾಡಿರಬಹುದಲ್ಲವೇ! ಅವನು ಒಂದು ಐಶ್ವರ್ಯವುಳ್ಳ ಪಟ್ಟಣವನ್ನು ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡು, ಸುವಾರ್ತೆಯನ್ನು ಸಾರಲು ಇಚ್ಛಿಸಿದ್ದನು - ಆದರೆ ಸೈತಾನನು ಇದನ್ನು ಸಹಿಸಲಿಲ್ಲ! ಪೌಲನು "ರೋಮಾಯಕ್ಕೆ ಹೋಗುವ" ಕನಸಿಗೆ ಸೈತಾನನ ಇತರರ ಮೂಲಕ ಅಡ್ಡಿ ಉಂಟುಮಾಡಿದ್ದನು (ಅಪೊಸ್ತಲರ ಕೃತ್ಯಗಳು 19:21): ಆಸ್ಯ ಸೀಮೆಯ ಯೆಹೂದ್ಯರು ಕೊಲೆ ಮಾಡಲೇ ಬೇಕೆಂದು ನಿಶ್ಚಯಿಸಿದವರು, ಸರಿಯಾದ ನಿರ್ಧಾರಗಳನ್ನು ಕೈಗೊಳ್ಳದ ರೋಮಾಯದ ದೇಶಾಧಿಪತಿಗಳು, ಗೊಂದಲಕ್ಕೊಳಗಾದ ಸಿಪಾಯಿಗಳನ್ನು ಉಪಯೋಗಿಸಿದ್ದನು. ಈ ಎಲ್ಲಾ ಸಂಗತಿಗಳಲ್ಲಿ, ದೇವರು ಪೌಲನೊಂದಿಗಿದ್ದನು, ಪೌಲನ ಹೊರತಾಗಿ ಸೈತಾನನಿಗೆ ಅಪಜಯವಾಯಿತು. ಸೈತಾನನ ಪ್ರಯತ್ನಗಳು ಉತ್ತಮವಾಗಿದ್ದರೂ (ಅದು ನೀಚವಾದದ್ದೇ), ಪೌಲನು ರೋಮಾಯದ ಹಾದಿಯಲ್ಲಿದ್ದನು (27:1).

ಸೈತಾನನ ತನಗಾದ ಅಪಜಯವನ್ನು ಒಪ್ಪಿಕೊಂಡನೇ? ಇಲ್ಲ! ಅವನ ಕೋಪ ವನ್ನು ವಾತಾವರಣದ ಮೇಲೆ ತೋರಿದನು: ಅಧ್ಯಾಯ 27 ಹಾಗೂ ಅಧ್ಯಾಯ 28ರ ಆರಂಭದಲ್ಲಿ, ಪೌಲನು ಹೇಗೂ ತನ್ನ ಪ್ರಯಾಣವನ್ನು ಮುಂದುವರಿಸಬಾರದೆಂದು ಸೈತಾನನು ಎಲ್ಲವನ್ನೂ ಸಕಲವಿಧವಾದ ಉಪಾಯಗಳನ್ನು ಮಾಡಿದನು: ಮೂರ್ಖರಾದ ಜನರನ್ನು ಕೋಪಗೊಂಡ ಸೃಷ್ಟಿಯನ್ನು[2] (ಭಯಂಕರವಾದ ಬಿರುಗಾಳಿ, ಕೋಪಗೊಂಡ

ಅಲೆಗಳು, ಒರಟಾದ ಮರಳುಗಾಡು ವಿಷಪೂರಿತ ಹಾವುಗಳು)! ಈ ತೊಂದರೆಗಳನ್ನು ಪೌಲನು ಹೇಗೆ ಎದುರಿಸಿದನು? ಅವನು ಯೆರೂಸಲೇಮಿನಲ್ಲೂ ಕೈಸರೈಯಲ್ಲೂ ಇದೇ ವಿಧವಾದ ಅಡಚಣೆಗಳನ್ನು ಎದುರಿಸಿದನು: ದೇವರ ಅನುಗ್ರಹದಿಂದಲೂ, ದೇವರ ಮೇಲಿನ ಭಕ್ತಿಯಿಂದಲೂ ಅವುಗಳನ್ನು ತಾಳಿಕೊಂಡನು!

ಅಧ್ಯಾಯ 27ರಲ್ಲಿ ಪೌಲನ ಕುರಿತಾದ ಇನ್ನೊಂದು ವಿಚಾರವನ್ನು ಪಂಡಿತರುಗಳು ಗಮನಿಸಿರುವರು, "ಒಂದು ವೇಳೆ ಇದು ಲೂಕನ ಉದ್ದೇಶದ ಕಥೆಯಾಗಿರಬಹುದು." ಪೌಲನನ್ನು ವಿವಿಧ ಪಾತ್ರದಲ್ಲಿ ನೋಡಿರುವದು ಗಮನಾರ್ಹವೇ: ಅನ್ಯ ಜನರ ಮುಖಂಡನಾಗಿದ್ದನು. ಹೇಗೂ ಪೌಲನ ಕುರಿತಾಗಿ ಲೂಕನು ಒತ್ತಿ ಹೇಳಿರುವದಿಲ್ಲ, ಆದರೆ ಪೌಲನು ದೇವರ ವಿಚಾರ ವಾಗಿ ಹೇಳಿರುವನು. ಮನುಷ್ಯ ದೃಷ್ಟಿಯಲ್ಲಿ ಅಂತಹ ಭೀಕರವಾದ ಹಡಗಿನ ಅಪಘಾತದಿಂದ ತಪ್ಪಿಸಿಕೊಳ್ಳುವದು ಅಸಾಧ್ಯ; ಆ ಸಮಯದಲ್ಲಿ ದೇವರ ಸಹಾಯದ ಅಗತ್ಯವಿತ್ತು. ವಚನ 23ರಿಂದ 25ರ ನಡುವೆ, ಮುಖ್ಯಾಂಶವನ್ನು ನೋಡುತ್ತೇವೆ, ಇಲ್ಲಿ ಪೌಲನು ತನ್ನ ಹಡಗಿನ ಸಹ ಪ್ರಯಾಣಿಕರೊಂದಿಗೆ ಮಾತನಾಡಿದನು:

> ... ನಾನು ಯಾರವನಾಗಿದ್ದೇನೋ ಯಾರನ್ನು ಸೇವಿಸುತ್ತೇನೋ ಆ ದೇವರಿಂದ ಬಂದ ಒಬ್ಬ ದೂತನು ಕಳೆದ ರಾತ್ರಿಯಲ್ಲಿ ನನ್ನ ಹತ್ತಿರ ನಿಂತು ಪೌಲನೇ, ಭಯಪಡಬೇಡ, ನೀನು ಚಕ್ರವರ್ತಿಯ ಮುಂದೆ ನಿಲ್ಲಬೇಕು; ಇದಲ್ಲದೆ ನಿನ್ನ ಸಂಗಡ ಈ ಹಡಗಿನಲ್ಲಿ ಪ್ರಯಾಣಮಾಡುವವರೆಲ್ಲರ ಪ್ರಾಣ ದೇವರು ನಿನ್ನ ಮೇಲಣ ದಯೆಯಿಂದ ಉಳಿಸಿಕೊಟ್ಟಿದ್ದಾನೆಂದು ನನ್ನ ಸಂಗಡ ಹೇಳಿದನು. ಆದದರಿಂದ ಜನರೇ ಧೈರ್ಯವಾಗಿರ್ರಿ. ನನಗೆ ಹೇಳಲ್ಪಟ್ಟ ಪ್ರಕಾರವೇ ಆಗುವದೆಂದು ದೇವರನ್ನು ನಂಬುತ್ತೇನೆ.

ಎರಡು ಉದ್ದೇಶಗಳನ್ನು ಹೊಂದಿದವನಾಗಿ ಲೂಕನು ಅದ್ಯಾಯ 27ನ್ನು ಬರೆದಿರುವನು: (1) ಪೌಲನ ಜೀವಿತದಲ್ಲಿನ ದೇವರ ಕಾರ್ಯ, ನಂತರ, (2) ನರಕದ ಯಾವುದೇ ಶಕ್ತಿಗಳು ದೇವರ ಯೋಜನೆಯನ್ನು ಉದ್ದೇಶವನ್ನು ತಡೆಯಲಾರವು. ಈ ಅಂಶದಿಂದ ನಮಗೇನಾದರು ಪ್ರಯೋಜನವಿದೆಯೇ? ನಿಶ್ಚಯವಾಗಿಯೂ ದೇವರು ನಮ್ಮಲ್ಲಿಟ್ಟಿರುವ ಉದ್ದೇಶವನ್ನು ಈಡೇರದಂತೆ ಮಾಡಲು ಸೈತಾನನು ಸಕಲ ಪ್ರಯತ್ನದಲ್ಲಿ ಮುಂದುವರಿಯುತ್ತಾನೆ (1 ಪೇತ್ರ 5:8). ನಾವುಗಳು ಬದುಕಲು ದೇವರ ಸಹಾಯ ಅತ್ಯಗತ್ಯ. ನಾವುಗಳು ನಮ್ಮ ಜೀವಿತದಲ್ಲಿ ಉಂಟಾಗುವ ಬಿರುಗಾಳಿಯನ್ನು ಎದುರಿಸಲು, ಅದ್ಯಾಯ 27 ಸಹಾಯ ಮಾಡುತ್ತದೆ.

ಜೀವಿತದ ಬಿರುಗಾಳಿ ಎಂದು ನಾನು ಹೇಳುವಾಗ, ನನ್ನನ್ನು ಅಪಾರ್ಥ ಮಾಡಿಕೊಳ್ಳಬೇಡಿರಿ. ಇತಾಲ್ಯಕ್ಕೆ ಹೋಗುತ್ತಿದ್ದ ಹಡಗಿಗೆ ಬೀಸಿದ ಬಿರುಗಾಳಿಯ ಕುರಿತು ಲೂಕನು ಊಹೆಯ ಮಾತನ್ನು ಹೇಳುತ್ತಿರುವದಿಲ್ಲ; ಬಿರುಗಾಳಿಯು ನಿಜವಾದದ್ದೇ ಅಪಾಯವು ಸತ್ಯವಾದದ್ದೇ, ಹೇಗಿದ್ದರೂ ಕೆಲವು ಪಂಡಿತರುಗಳು ಪೌಲನ ಸಮುದ್ರ ಪ್ರಯಾಣದ ಜೊತೆಗೆ ನಮ್ಮ ಜೀವಿತಗಳನ್ನೂ ಹೋಲಿಸುವರು. ಒಬ್ಬ ಪ್ರಯಾಣಿಕನ *ಸಮುದ್ರ ಯಾತ್ರೆಯನ್ನು* ಲೂಕನು ಬರೆದಿರುವನು.[3]

ಅದ್ಯಾಯ 27ರಲ್ಲಿನ ಧ್ಯಾನದಲ್ಲಿ, ಸಂತೋಷದ ಒಂದು ಸಾಹಸವನ್ನು ತೋರಲು ನಾನು ಇಚ್ಚಿಸುತ್ತೇನೆ. ಅದೇ ಸಮಯದಲ್ಲಿ ಇದನ್ನು ನಿಮ್ಮ ಜೀವನಕ್ಕೂ ಹೋಲಿಸಿ ಕೊಳ್ಳಬೇಕೆಂದು ತಿಳಿಯಪಡಿಸುತ್ತೇನೆ.[4] ಪೌಲನು ಎದುರಿಸಿದಂತೆ, ನಾವುಗಳು ಸಹ ಕೆಟ್ಟ ಹಾಗೂ ಒಳ್ಳೆಯ ದಿವಸಗಳನ್ನು ಎದುರಿಸುತ್ತೇವೆ - ಮತ್ತು ಆಕಸ್ಮಿಕವಾದ ಸಂಗತಿಗಳನ್ನು ಎದುರಿಸಬಹುದು! "ವ್ಯತಿರಿಕ್ತವಾದ ಬಿರುಗಾಳಿ" ಹಾಗೂ ಪ್ರವಾಹಗಳ ಕುರಿತು ಈ ಅಧ್ಯಾಯನದಲ್ಲಿ ತಿಳಿದು ಅದನ್ನು ನಮ್ಮ ಸಮಸ್ಯೆಗಳೊಂದಿಗೆ ಹೋಲಿಸಿಕೊಳ್ಳೋಣ. ಮುಂದಿನದರಲ್ಲಿ ಅಧ್ಯಾಯ 27ರ, ಅಭೂತ ಪೂರ್ವವಾದ ಮುಕ್ತಾಯವನ್ನು ಗಮನಿಸೋಣ, ದೇವರ ಅನುಗ್ರಹವನ್ನು ಮೆಚ್ಚಿಕೊಳ್ಳೋಣ.

## “ನಾವು ಸಮುದ್ರ ಮಾರ್ಗವಾಗಿ ಹೋದೆವು” (27:1-3)

ಪೌಲನು ಕೈಸರನ ಮುಂದೆ ಹೇಳಿಕೊಳ್ಳುವೆನೆಂದು ಹೇಳಿದ್ದನು (25:11). ಕ್ರಿ.ಶ. 59[5]ರ ಅಗಸ್ಟನಲ್ಲಿ ಅವನನ್ನು ರೋಮಾಯಕ್ಕೆ ಸ್ಥಳಾಂತರ ಮಾಡುವ ಕಾರ್ಯವನ್ನು ಸಿದ್ಧಮಾಡಿಕೊಂಡಿದ್ದರು. “ನಾವು ಸಮುದ್ರ ಮಾರ್ಗವಾಗಿ ಇತಾಲ್ಯ ದೇಶಕ್ಕೆ ಹೋಗಬೇಕೆಂದು ತೀರ್ಮಾನವಾದ ಮೇಲೆ ಪೌಲನನ್ನೂ ಬೇರೆ ಕೆಲವು ಸೆರೆಯವರನ್ನೂ ಚಕ್ರವರ್ತಿಯ. ಪಟಾಲಮಿಗೆ ಸೇರಿದ ಯೂಲ್ಯನೆಂಬ[6] ಒಬ್ಬ ಶತಾಧಿಪತಿಗೆ ಒಪ್ಪಿಸಿದರು” (ವಚನ 1).

ಮೊದಲನೆಯ ವಚನದಲ್ಲಿ “ನಾವು” ಎಂಬ ಪ್ರಥಮ ಪದವನ್ನು ಗಮನಿಸುತ್ತೇವೆ. ಲೂಕನು ಪೌಲನೊಂದಿಗೆ ಯೆರೂಸಲೇಮಿಗೆ ಪ್ರಯಾಣಮಾಡಿದ್ದನು (21:17) ಮತ್ತು ಈಗ ಪೌಲನೊಂದಿಗೆ ರೋಮಾಯಕ್ಕೆ ಪ್ರಯಾಣಮಾಡಲು ಸಿದ್ಧನಾಗಿದ್ದನು. “ಎರಡನೇ ವಚನದಲ್ಲಿ, ಮೆಕೆದೋನ್ಯಕ್ಕೆ ಸೇರಿದ ಥೆಸಲೋನಿಕದ ಅರಿಸ್ತಾರ್ಕನು” ಎಂದು ಗಮನಿಸುವಾಗ, ಪೌಲನ ಇನ್ನೊಬ್ಬ ಸ್ನೇಹಿತನಾದ ಇವನೂ ಸಹ ಈ ಹಿಂದೆ ಪೌಲನೊಂದಿಗೆ ಯೆರೂಸಲೇಮಿಗೆ ಪ್ರಯಾಣಿಸಿದ್ದನು (20:4), ಈಗ ಅವನೂ ಸಹ ಪೌಲನ ಸಂಗಡ ಇದ್ದನು.[7]

“ಬೇರೆ ಕೆಲವು ಸೆರೆಯವರು” ಎಂಬ ದುಃಖದ ಸಂಗತಿಯನ್ನು ನೋಡುತ್ತೇವೆ.[8] *ಬೇರೇ ವಿಧವಾದ* ಎಂಬ ಗ್ರೀಕ್‌ನ ಹೇಳಿಕೆಯಾಗಿದೆ.[9] ಈ ಇತರೆ ಸೆರೆಯವರು ಪ್ರಾಯಶಃ ಅಪರಾಧಿಗಳಾಗಿ, ರೋಮಾಯರ ಮೃಗಗಳಿಗೆ ಆಹಾರಕ್ಕಾಗಿ ರವಾನಿಸಲಾಗಿರಬಹುದು, ಇದರಿಂದ ಜನರಿಗೆ ಮನರಂಜನೆಯಾಗುತ್ತಿತ್ತು.[10] ಇಂಥಹ ಒಂದು ಕ್ರೂರವಾದ ಪ್ರಪಂಚದಲ್ಲಿ ಅವರು ಬದುಕಿದ್ದರು.

ವಚನ 1ರಲ್ಲಿ ಪಟಾಲಮಿಗೆ ಸೇರಿದ ಯೂಲ್ಯನೆಂಬ ಒಬ್ಬ ಶತಾಧಿಪತಿಗೆ ಒಪ್ಪಿಸಿದರು ಎಂಬುದಾಗಿದೆ. ಅಗಸ್ತನು ಅಂದರೆ (ಚಕ್ರವರ್ತಿ) ಈ ಪಟಾಲಮಿನವನ್ನು ಅಗಸ್ತನೊಂದಿಗೆ ಸಂಬಂಧಪಟ್ಟವನು ಎಂಬುದು ಕೆಲವರ ಅಭಿಪ್ರಾಯ. ಇವನು ರಾಜಮನೆತನದವರನ್ನು ಕಾಯುವವನು ಎದು ಕೆಲವರ ತರ್ಕ, ಇವನೊಂದಿಗೆ ರಾಜಮನೆತನದವರು ಹಾಗೂ ದೇಶಾಧಿಪತಿಗಳ ಸಂರಕ್ಷಣೆಗಾಗಿ ಪ್ರಯಾಣಿಸುತ್ತಿದ್ದರು.[11] ಶಿಷ್ಟಾಚಾರದ ಪ್ರಕಾರ ಸ್ಥಳೀಯ ಅಧಿಕಾರಿಯಾದ ಫೆಸ್ತನು ಪೌಲನನ್ನು ಯೂಲ್ಯನ ವಶಕ್ಕೆ ವಹಿಸಿಕೊಟ್ಟನು.[12] ಪೌಲನು ರೋಮಾಯದ ಹಕ್ಕುದಾರನು ಹಾಗೂ ಅವನಿಗೆ ನ್ಯಾಯಯುತವಾದ ತೀರ್ಪು ನೀಡುವಲ್ಲಿ ಆಧ್ಯತೆ ನೀಡಬೇಕೆಂಬ ಪತ್ರವನ್ನು ಫೆಸ್ತನು ಯೂಲ್ಯನಿಗೆ ನೀಡಿದನು.

ಶಿಷ್ಠಾಚಾರಗಳು ಮುಗಿದ ನಂತರ, ಎಲ್ಲರೂ ಹಡಗನ್ನು ಹತ್ತಿದರು.[13] “ಆಗ ಅದ್ರಮಿತ್ತಿಯದಿಂದ ಬಂದು ಆಸ್ಯ ಸೀಮೆಯ ಕರಾವಳಿಯ ಸ್ಥಳಗಳಿಗೆ ಹೋಗುವದಕ್ಕಿದ್ದ ಒಂದು ಹಡಗನ್ನು[14] ಹತ್ತಿ ಸಮುದ್ರ ಪ್ರಯಾಣವನ್ನು ಪ್ರಾರಂಭಿಸಿದೆವು” (27:2ಎ). ಇತಾಲ್ಯಕ್ಕೆ ಹೋಗುವ ಹಡಗು ಇಲ್ಲದೆ ಇದ್ದದ್ದರಿಂದ, ಅವರು ಕರಾವಳಿಯ ಉತ್ತರ ದಿಕ್ಕಿಗೆ ಹೊರಟು ರೋಮಾಯಕ್ಕೆ ಹೋಗುವ ಹಡಗನ್ನು ತಲುಪಬೇಕೆಂದಿದ್ದರು. ಪ್ರಯಾಣವು ಸುಗಮವಾಗಿ ದ್ದರೆ, ಅವರು ಅಕ್ಟೋಬರ್ ಅಂತ್ಯದ ವೇಳೆಗೆ ರೋಮಾಯವನ್ನು ತಲುಪುವ ಸಾಧ್ಯತೆಯಿತ್ತು.

“ಮರುದಿನ ಸೀದೋನಿಗೆ ಮುಟ್ಟಿದೆವು” ಎಂದು ಲೂಕನು ದಾಖಲಿಸಿರುವನು (ವಚನ 3ಎ). ವ್ಯಾಪಾರ ಕೇಂದ್ರವಾದ ಕೈಸರೈಯಿಂದ ಎಪ್ಪತ್ತು ಅಥವಾ ಅಧಿಕವಾದ ಮೈಲುಗಳ ಅಂತರದಲ್ಲಿದ್ದ ಫೊಯಿನಿಕೆಯಲ್ಲಿ ನಿಂತಿತು. ಹಡಗುದಾಣದಲ್ಲಿ, ಸೆರೆಯವರನ್ನು ಸರಪಳಿಯಲ್ಲಿ ಬಿಗಿದು ಹಡಗಿನ ಕೆಳಕೋಣೆಲ್ಲಿಟ್ಟಿದ್ದರೂ, “ಯೂಲ್ಯನು ಪೌಲನಿಗೆ ದಯೆಯನ್ನು ತೋರಿ ಸುವವನಾಗಿ ಅವನನ್ನು ಸ್ನೇಹಿತರ ಬಳಿಗೆ ಹೋಗಿ ಸತ್ಕಾರ ಹೊಂದುವದಕ್ಕೆ ಬಿಟ್ಟನು”[15] (ವಚನ 3ಬಿ). ಹೇಗೂ, ಒಬ್ಬ ಸಿಪಾಯಿಯು ಅವನ ಸಂಗಡ ಹೋಗಿದ್ದನು. ಆ ಸ್ನೇಹಿತರು “ಜೊತೆ ಕ್ರೈಸ್ತ ರಾಗಿರಬಹುದು” (3 ಯೋಹಾನ 14; ನೋಡಿರಿ ಯೋಹಾನ 15:5).[16] ಬಹುಶಃ ಈ ಹಿಂದೆ ಪೌಲನು ಅವರನ್ನು ಫೊಯಿನಿಕೆಯಲ್ಲಿ ಸಂಧಿಸಿರಬಹುದು (ಅಪೊಸ್ತಲರ ಕೃತ್ಯಗಳು 12:25; 15:3) ಅಥವಾ ಯೆರೂಸಲೇಮಿನ ಪ್ರಯಾಣದ ಮಾರ್ಗ ಮಧ್ಯದಲ್ಲಿ,

ಒಂದು ವಾರ ಕಾಲ ತೂರ್ ಪಟ್ಟಣದಲ್ಲಿ ತಂಗಿರಬಹುದು (21:3, 4). ಅಥವಾ ಒಂದು ವೇಳೆ ಅವರನ್ನು ಹಿಂದೆ ಸಂಧಿಸದೇ ಇರಲೂ ಬಹುದು. ಇದರಲ್ಲಿ ಯಾವುದೇ ವ್ಯತ್ಯಾಸವು ಇರುವದಿಲ್ಲ. ಕ್ರೈಸ್ತರು ಯಾವಾಗಲೂ ಸ್ನೇಹಿತರೇ ನಮ್ಮ ಪ್ರವಾಸ ಕಾಲದಲ್ಲಿ, ನಮಗೆಲ್ಲರಿಗೂ ಸ್ನೇಹಿತರ ಅಗತ್ಯವಿದೆ (ಜ್ಞಾನೋಕ್ತಿ 17:17).

## "ಎದುರು ಗಾಳಿ ಬೀಸುತ್ತಿದ್ದರಿಂದ" (27:4-8)

ಸೀದೋನಿನಿಂದ, "... ಹೊರಟು ಎದುರಿಗಾಳಿ ಬೀಸುತ್ತಿದ್ದದರಿಂದ[17] ಕುಪ್ರದ್ವೀಪದ ಮರೆಯಲ್ಲಿ ಸಾಗಿದೆವು" (ವಚನ 4). ಪಶ್ಚಿಮ ದಿಕ್ಕಿನಿಂದ ಬೇಸಿಗೆಯ ಗಾಳಿ ಬೀಸುತ್ತಿದ್ದರಿಂದ ಹಡಗು[18] ಅದಕ್ಕೆ ವಿರುದ್ಧವಾಗಿ ಹೋಗುವ ಸಾಮರ್ಥ್ಯವನ್ನು ಹೊಂದಿರಲಿಲ್ಲ (ವಚನ 15), ತಮ್ಮನ್ನು ಸಂರಕ್ಷಿಸಿಕೊಳ್ಳಲು ಉತ್ತರ ದಿಕ್ಕಿನಲ್ಲಿ ಪ್ರಯಾಣಿಸಿ ಕುಪ್ರ ದ್ವೀಪವನ್ನು ಸುತ್ತುಹಾಕಿದರು.

ದೇವರ ಸುದುದ್ದೇಶದ ಪ್ರಕಾರ ಪೌಲನು ರೋಮಾಯಕ್ಕೆ ಹೊರಟಿದ್ದರೂ, ಅವನು ಎದುರು ಗಾಳಿಯನ್ನು ಎದುರಿಸಬೇಕಾಯಿತು. ನೀವುಗಳು ದೇವರಿಗೆ ಸಮರ್ಪಿಸಿಕೊಂಡಿರುವದರಿಂದ, ನೀವು ಬಯಸಿದ ಹಾಗೆ ಗಾಳಿಯು ಬೀಸುವದಿಲ್ಲ ಎಂದು ನೀವುಗಳು ಅರಿಯಬೇಕು. ಪ್ರಯಾಣಿಕರುಗಳ ಅನುಭವದಂತೆ ಪದೇ ಪದೇ "ವ್ಯತಿರಿಕ್ತವಾದ ಗಾಳಿಯು" ಬೀಸುತ್ತಿರುತ್ತದೆ.

ಅವರು ಕುಪ್ರದ ಉತ್ತರ ದಿಕ್ಕಿನಲ್ಲಿ ಪ್ರಯಾಣಿಸಿದಾಗ, ಪೌಲನ ಅಚ್ಚುಮೆಚ್ಚಿನ ಪ್ರದೇಶಗಳನ್ನು ಹಾದು ಹೋದರು: "... ಅವರು ಕುಪ್ರ ದ್ವೀಪದ ಮರೆಯಲ್ಲಿ ಸಾಗಿ ಕಿಲಿಕ್ಯಕ್ಕೂ ಪಂಫುಲ್ಯಕ್ಕೂ [ಪೌಲನ ನಿವಾಸದ ಸ್ಥಳ], [ಪೌಲ ಬಾರ್ನಬರು ಸೇವೆಯ ನಿಮಿತ್ತ ಸೇರಿದ ಪ್ರಥಮ ಸ್ಥಳ (13:13)]." ಎದುರಾಗಿರುವ ಸಮುದ್ರವನ್ನು ದಾಟಿದರು[19] (ವಚನ 5ಎ). "ಅವರು ಸುಮಾರು ಎರಡು ವಾರಗಳ ಕಾಲ ಪ್ರಯಾಣಮಾಡಿ ಲುಕೀಯ ಸೀಮೆಯಲ್ಲಿರುವ[20] ಮುರಕ್ಕೆ ಬಂದರು" (ವಚನ 5ಬಿ). ಅದು ಆಸ್ಯ ಸೀಮೆಯ ದಕ್ಷಿಣ ಮತ್ತು ಪಶ್ಚಿಮದ ಮೂಲೆಯಲ್ಲಿತ್ತು.

ಮುರವು ಐಗುಪ್ತ ಹಾಗೂ ರೋಮಾಯದ ಹಾದಿಯಲ್ಲಿ ಇತ್ತು.[21] "ಅಲ್ಲಿ ಶತಾಧಿಪತಿಯು ಅಲೆಕ್ಸಾಂದ್ರಿಯದಿಂದ ಬಂದು ಇತಾಲ್ಯಕ್ಕೆ ಹೋಗುತ್ತಿದ್ದ[22] ಒಂದು ಹಡಗನ್ನು ಕಂಡನು" (ವಚನ 6ಎ). ಆ ಹಡಗಿನಲ್ಲಿ ಗೋದಿಯನ್ನು ಸಾಗಿಸುತ್ತಿದ್ದರು (ವಚನ 38). ಕಾಳುಗಳನ್ನು ಸಾಗಿಸುವ ಹಡಗುಗಳು ಬಹಳ ದೊಡ್ಡದಾಗಿದ್ದವು[23] (ಅದರಲ್ಲಿ ಇನ್ನೂರ ಎಪ್ಪಾತ್ತಾರು ಜನರು[24] ಪ್ರಯಾಣಿಸಬಹುದಿತ್ತು [ವಚನ 37] ಜನರ ಸಂಗಡ ವಸ್ತುಗಳನ್ನೂ ಸಾಗಿಸುತ್ತಿದ್ದರು). ಆ ಹಡಗುಗಳನ್ನು ರೋಮಾಯರ ಆಡಳಿತವು ಒಪ್ಪಂದದ ಮೇರೆಗೆ ಪಡಕೊಂಡಿದ್ದರು. ಅದು ರೋಮಾಯದ ಪ್ರತಿನಿಧಿಯಾಗಿತ್ತು, ಅದು ಜೂಲಿಯಸ್ಸನ ಯೋಗ್ಯತೆಗೆ ತಕ್ಕ ಹಾಗೆ ಇತ್ತು. ಅದು ಅಕ್ಟೊಬರ್‌ನಲ್ಲಿ ರೋಮಾಯವನ್ನು ತಲುಪುವ ಸಾಧ್ಯತೆಯಿದ್ದರೂ, ಶತಾಧಿಪತಿಯು ಎಲ್ಲರನ್ನೂ ಇನ್ನೊಂದು ದೊಡ್ಡ ಹಡಗಿಗೆ ವರ್ಗಾಯಿಸಿದನು (ವಚನ 6ಬಿ).

ಅವರು ಅಸ್ಯ ಸೀಮೆಯ ಪಶ್ಚಿಮ ದಿಕ್ಕಿನ ಕರಾವಳಿಗೆ ಸಮುದ್ರಯಾನ ಮಾಡಿದರು. ಪರಿಸ್ಥಿತಿಯು ಕ್ಷೀಣಿಸುತ್ತಾ ಇರಲು; ಹವಮಾನವು ಹದಗೆಟ್ಟಿತು. ಅನೇಕ ದಿವಸ ನಿಧಾನವಾಗಿ ಸಾಗುತ್ತಾ,[25] ಎಷ್ಟೋ ಪ್ರಯಾಸದಿಂದ "ಕ್ನೀದಕ್ಕೆ ಬಂದರು" (ವಚನ 7ಎ). ಅದು ರೋಮಾಯದ ದಕ್ಷಿಣ ತುದಿಯಲ್ಲಿ ನೆಲೆಗೊಂಡಿತ್ತು. ಆದರೂ ಅವರು ಗ್ರೀಸಿನ ಸಮುದ್ರ (ಅಖಾಯ)ವನ್ನು ದಾಟಲು ಯತ್ನಿಸಿದರು, "ಆದರೆ ಗಾಳಿಯು ಅವರನ್ನು ಅಲ್ಲಿಗೆ ಮುಟ್ಟಗೂಡಿಸಲಿಲ್ಲ" (ವಚನ 7ಬಿ).

ನಿಮ್ಮ ಯೋಜನೆಯಂತೆ ಕಾರ್ಯಗಳು ನಡೆಯದಿದ್ದರೆ, ನಿಮಗೆ ಕಷ್ಟವಾಗುತ್ತದೆಯೇ? ಅಲೆಕ್ಸಾಂದ್ರಿಯದ ಧವಸದ ಹಡಗಿನವರು ನಿಮಗೆ ಅನುಕಂಪ ತೋರಿಸಬಹುದು.

ಪುನಃ ಸಂರಕ್ಷಣೆಗಾಗಿ ಒಂದು ದ್ವೀಪವನ್ನು ಅವಲಂಭಿಸಲಾಯಿತು - ಅದು ಕ್ರೇತ

ದ್ವೀಪವಾಗಿತ್ತು[26] (ವಚನ 7ಸಿ) ಅದು ದಕ್ಷಿಣಕ್ಕೆ ಬಹಳ ದೂರದಲ್ಲಿತ್ತು. "ಕ್ರೇತ ದ್ವೀಪದ ಮರೆಯಲ್ಲಿ ಸಾಗಿ ಸಲ್ಮೋನೆಗೆ ಎದುರಾಗಿ ಬಂದು ಪ್ರಯಾಸದಿಂದ" (ವಚನ 8ಎ; NIV) ಈ ಕರಾವಳಿಯನ್ನು ಹಿಡಿದು ಹೋಗಿ ಚಂದ ರೇವುಗಳೆಂಬ ಸ್ಥಳಕ್ಕೆ ಸೇರಿದರು.[27] "ಅದರ ಹತ್ತರದಲ್ಲಿ ಲಸಾಯವೆಂಬ ಪಟ್ಟಣವು ಇತ್ತು"[28] (ವಚನ 8ಬಿ) - ಅವರು ಆ ಸ್ಥಳದಲ್ಲಿ ಹಡಗನ್ನು ನಿಲ್ಲಿಸಿ, ವಾತವರಣವು ಸರಿಯಾಗ ಬಹುದೆಂದು ತಾಳ್ಮೆ ಕಳೆದು ಕೊಂಡು ಕಾಯುತ್ತಿದ್ದರು.

ನಿಮ್ಮ ಯೋಜನೆಗಳನ್ನು "ನಿಗಧಿಪಡಿಸಿಕೊಂಡು"[29] ಒಂದು ಉತ್ತಮವಾದ ಸಂದರ್ಭಕ್ಕಾಗಿ ಕಾಯುವಾಗ, ಅದರಲ್ಲಿ ಉಂಟಾಗುವ ಕಸಿವಿಸಿಯನ್ನು ಬಲ್ಲವರಾಗಿರುವಿರಿ.

## "ಮುಂದಿನ ಸಮುದ್ರಯಾನವು ಅಪಾಯಕಾರಿಯಾಗಿತ್ತು" (27:9-13)

ದಿನಗಳು ಕಳೆದಂತೆ, ಅಕ್ಟೋಬರ್ ಅಂತ್ಯದಲ್ಲಿ ರೋಮಾಯವನ್ನು ತಲುಪುವ ಅಕಾಂಕ್ಷೆಯು ಕ್ಷೀಣಿಸುತ್ತಾ ಬಂದಿತು. "ಹೀಗೆ ಬಹುಕಾಲ ಕಳೆದುಹೋದ ನಂತರ ಸಮುದ್ರ ಪ್ರಯಾಣ ಮಾಡುವದು ಅಪಾಯಕಾರಿಯಾಗಿತ್ತು" (ವಚನ 9ಎ). ಸೆಪ್ಟೆಂಬರ್ ಮಧ್ಯದಿಂದ ನವಂಬರ್ 11ರ ವರೆಗಿನ ಮೆಡಿಟೇರಿಯನ್ ಸಮುದ್ರಯಾನವು ಅಪಾಯಕರವಾದ ಸಮಯ ವಾಗಿತ್ತು. ನವಂಬರ್ 11 ರಿಂದ, ಮುಂದಿನ ವಸಂತ ಕಾಲದವರೆಗೆ ಸಮುದ್ರಯಾನವು ನಿಷೇಧ ವಾಗಿತ್ತು.[30] ಈಗ ಆ ಹಡಗು ಅಪಾಯಕರವಾದ ಸಮಯದಲ್ಲಿತ್ತು; ಮತ್ತು "ಮಹಾ ಉಪವಾ ಸದ ದಿವಸವೂ ಆಗಿ ಹೋಗಿತ್ತು" (ವಚನ 9ಬಿ). ಅದು ಯೆಹೂದ್ಯರ ಒಡಂಬಡಿಕೆಗೆ ಹೋಲಿಕೆಯಾಗಿತ್ತು (ಯಾಜಕಕಾಂಡ 16:29; 23:26, 27), ಕ್ರಿ.ಶ. 59ರ ಅಕ್ಟೋಬರ್ 5 ನೇಯ ದಿನವಾಗಿತ್ತು.[31]

ಸಮಯ ಜಾರಿ ಹೋಗುವದನ್ನು ಹಡಗಿನ ಪ್ರಯಾಣಿಕರೆಲ್ಲರೂ ಅರಿತರು. ಪ್ರಯಾಣಮಾಡುವದು ಕಷ್ಟಕರ ಸಂಗತಿಯಾದಾಗ, ಹಡಗಿನ ಹೊಣೆ ಹೊತ್ತವರೆಲ್ಲರೂ[32] (ವಚನ 11) ಏನು ಮಾಡಬೇಕೆಂದು ಚರ್ಚಿಸಿದರು "ಆ ಚಳಿಗಾಲವನ್ನು ಕಳೆಯಲು ಲಸಾಯವು ತಕ್ಕ ಸ್ಥಳವಲ್ಲವೆಂದು ನಿರ್ಧರಿಸಿಕೊಂಡರು" (ವಚನ 12ಎ): ಏಕೆಂದರೆ ಅದು ಸಮುದ್ರದ ತೆರೆದ ಭಾಗದಲ್ಲಿತ್ತು; ಹಡಗು ಸಮುದ್ರದ ಹವಾಮನವನ್ನು ಎದುರಿಸಬೇಕಿತ್ತು; ಅದರಲ್ಲಿದ್ದ ಸಕಲ ವಸ್ತುಗಳು ಜಲಾವೃತವಾಗುವ ಸಾಧ್ಯತೆಯಿತ್ತು (ಲಸಾಯವು ಚಿಕ್ಕ ಸ್ಥಳವಾಗಿತ್ತು [ವಚನ 8ಸಿ]) ಮತ್ತು ಹತ್ತಿರದಲ್ಲಿ ದೊಡ್ಡ ಪಟ್ಟಣಗಳು ಇರಲಿಲ್ಲ. ಇನ್ನೊಂದೆಡೆ, 40 ಮೈಲಿಯ ಪಶ್ಚಿಮಕ್ಕೆ ಫೊಯಿನಿಕೆಯು ಇತ್ತು. ಅದು ಪ್ರದಾನ ಪಟ್ಟಣವೂ ಹಾಗೂ ಸುರಕ್ಷೆಯ ಹಡಗುದಾಣವನ್ನು ಹೊಂದಿತ್ತು. ಅಲ್ಲಿ ಅವರು ಹಾಗೂ ಅವರ ಹಡಗು ಹಿಮಕಾಲವನ್ನು ಹಿತವಾಗಿ ಕಳೆಯಲು ಸಾಧ್ಯವಿತ್ತು.

ಅವರು ಲಸಾಯವನ್ನು[33] ಬಿಟ್ಟು ಪ್ರಯಾಣಮಾಡುವದನ್ನು ಪೌಲನು ಅರಿತು ಪೌಲನು ಗಾಬರಿಗೊಂಡನು. "ಪೌಲನು ಸಮುದ್ರ ಯಾನದ ಪ್ರಯಾಣದ ಅನುಭವವನ್ನು ಹೊಂದಿದವನಾಗಿದ್ದನು."[34] ಮೆಡಿಟರೇನಿಯನ್ ಸಮುದ್ರದಲ್ಲಿ ಪೌಲನು ಮಾಡಿದ ಹನ್ನೊಂದು ಪ್ರಯಾಣದ ಕುರಿತು ಲೂಕನು ದಾಖಲು ಮಾಡಿರುವನು. (ರೋಮಾಯದ ಪ್ರಯಾಣವನ್ನು ಹೊರತು ಪಡಿಸಿ) ಮತ್ತು ಸುಮಾರು 3,500 ಮೈಲುಗಳ ಸಮುದ್ರ ಪ್ರಯಾಣವನ್ನು ಮಾಡಿದ್ದನು. ಹಾಗೂ ಪೌಲನ ಇತರೆ ಪ್ರಯಾಣದ ಕುರಿತು ಲೂಕನು ತಿಳಿಸಿರುವದಿಲ್ಲ. ಅವನು ಮೂರು ಸಾರಿ ಹಡಗಿನ ಅಪಘಾತಕ್ಕೆ ಒಳಗಾಗಿದ್ದನು.[35] "ಒಂದು ರಾತ್ರಿ, ಒಂದು ಹಗಲು ಸಮುದ್ರದಲ್ಲಿದ್ದನು" (2 ಕೊರಿಂಥ 11:25ಡಿ). ಆದ್ದರಿಂದ ಪೌಲನು ತನ್ನ ಮನಸ್ಸಿನಲ್ಲಿರುವದನ್ನು ಹಡಗಿನ ಜನರಿಗೆ ಹೇಳುವದಕ್ಕೆ ಹಿಂಜರಿಯಲಿಲ್ಲ: "ಪೌಲನು, ಜನರೇ, ಈ ಪ್ರಯಾಣದಿಂದ ಸರಕಿಗೂ ಹಡಗಿಗೂ ಮಾತ್ರವಲ್ಲದೆ ನಮ್ಮ ಪ್ರಾಣಗಳಿಗೂ ಕಷ್ಟವೂ ಬಹು ನಷ್ಟವೂ ಸಂಭವಿಸುವದೆಂದು ನನಗೆ ತೋರುತ್ತದೆ ಎಂದು ಅವರನ್ನು ಎಚ್ಚರಿಸಿದನು" (ವಚನ 10).

ಪೌಲನ ಈ ಹೇಳಿಕೆಯು ಪ್ರೇರಿತವಾದದ್ದೆ? ಅವನು ಹೊಂದಿದ್ದ ಅನುಭವದ ನಿಮಿತ್ತ ಈ ಹೇಳಿಕೆಯನ್ನು ಹೇಳಿರಬಹುದು ಎಂಬದು ನನ್ನ ಊಹೆಯಾಗಿದೆ: (1) ಅದು ಪರಲೋಕ ದಿಂದ ಬಂದ ಹೇಳಿಕೆಯೆಂದು ಪೌಲನು ವಿವರಿಸಲಿಲ್ಲ (ನಂತರ ಪ್ರಕಟಿಸಿದ ಹಾಗೆ ವಚನ 23). (2) ಅವನು "ಎಚ್ಚರಿಸಿದನು" "ಕಳೆದು ಹೋದ ಅನುಭವದ ನಿಮಿತ್ತ ಎಂಬ ಗ್ರೀಕ್ ಅನುವಾದವಾಗಿದೆ." (3) ಅವರು ಹೇಳಿದ್ದೆಲವು ಕ್ರಮವಾಗಿ ನಡೆಯದೇ ಇರಬಹುದು (ಅಲ್ಲಿ ಯಾರೂ ಸಾಯಲಿಲ್ಲ: ವಚನಗಳು 22, 44).[36]

ಈ ಹೇಳಿಕೆಯು ಪ್ರಮುಖ ಅಧಿಕಾರಿಯಾದ ಯೂಲ್ಯನಲ್ಲಿ ಯಾವ ಪರಿಣಾಮವನ್ನು ಬೀರಲಿಲ್ಲ. ಬಿಡಾರಗಳನ್ನು ನೇಯುವವನೇ ರಬ್ಬಿಯೇ ಈ ವಿಚಾರವನ್ನು ನೀನು ಹೇಗೆ ಅರಿಯಲು ಸಾಧ್ಯ? ನುರಿತರಾದ ಜನರು ಪ್ರಯಾಣವನ್ನು ಮುಂದುವರಿಸಲು ಹೇಳುವಾಗ, ವಾಗ್ವಾದ ಮಾಡಲು ನಾನು ಯಾರು? "ಆದರೆ ಪೌಲನು ಹೇಳಿದ ಮಾತುಗಳಿಗಿಂತ ನಾವಿಕನೂ ಹಡಗಿನ ಯಜಮಾನನೂ ಹೇಳಿದ ಮಾತಿಗೆ ಶತಾಧಿಪತಿಯು ಹೆಚ್ಚಾಗಿ ಲಕ್ಷ್ಯಕೊಟ್ಟನು" (ವಚನ 11). "ಅಲ್ಲಿಂದ ಹೊರಟು ಸಾಧ್ಯವಾದರೆ ಫೋಯಿನಿಕ್ಸ್[37] ಊರನ್ನು ಸೇರಿ ಅಲ್ಲೇ ಆ ಹಿಮಕಾಲವನ್ನು ಕಳೆಯಬೇಕೆಂದು ಹೆಚ್ಚು ಜನರು,[38] ಆಲೋಚನೆ ಹೇಳಿದರು" (ವಚನ 12ಬಿ).

ತಪ್ಪು ನಿರ್ಧಾರದ ಶಾಸ್ತ್ರೀಯ ಉದಾಹರಣೆಯು ಇಲ್ಲಿರುತ್ತದೆ: ದೇವ ಭಕ್ತರ ಸಲಹೆಗಳನ್ನು ನಿರಾಕರಿಸುವದು (ಜ್ಞಾನೋಕ್ತಿ 1:5; 19:20; ಪ್ರಕಟಣೆ 3:8); ಆದಾಯ ಹಾಗೂ ದುರಾಶೆಯನ್ನು ಹೊಂದಿದವರ ಸಲಹೆಗಳು, ಜನರ ಹಾಗೂ ನಿಯಮಗಳನ್ನು ಹೊಂದಿದವರಿಗಿಂತಲೂ ಸಲಹೆಗಳಿಗಿಂತಲೂ ಪ್ರಮುಖವಾಗಿರುತ್ತವೆ (ಜ್ಞಾನೋಕ್ತಿ 12:5; 1 ಕೊರಿಂಥ 3:18-20); ಮತ್ತು ಬಹುಮತ ಇರುವ ಜನರನ್ನೇ ಹಿಂಬಾಲಿಸುವರು (ವಿಮೋಚನಾಕಾಂಡ 23:2; ಮತ್ತಾಯ 7:13).

ಅಲ್ಲಿ ಮುಂದೆ ಸಂಭವಿಸಿದ ಅಪಘಾತಕ್ಕೆ ಪೌಲನು ಹೊಣೆಯಾಗಲಿಲ್ಲ, ಅದು ಇತರರ ತಪ್ಪಿನಿಂದಲೇ ಉಂಟಾಯಿತು. ಕೆಲವು ಸಾರಿ ನಮ್ಮ ಪ್ರವಾಹವನ್ನು ನಮ್ಮ ಮೇಲೆ ತಂದು ಕೊಳ್ಳುತ್ತೇವೆ (ಯೋನ 1:12), ಕೆಲವು ಸಾರಿ ಇತರರ ತಪ್ಪಿನಿಂದ ನಮಗೆ ಉಂಟಾಗುತ್ತದೆ. ನಮ್ಮ ಸ್ವ ತೀರ್ಪಿನಿಂದ ಅವಗಢಗಳು ಸಂಭವಿಸದೆ - ಬಹುಮತದಿಂದ ಪೌಲನಿಗೆ - ಅವಘಡ ಸಂಭವಿಸಿದಂತೆ ನಮಗೂ ಉಂಟಾಗುತ್ತದೆ.

ಮೇಲಿನ ತೋರಿಕೆಗೆ ಹಡಗಿನಲ್ಲಿದ್ದ ಬಹುತೇಕ ಜನರು ಉತ್ತಮವಾದ ನಿರ್ಣಯವನ್ನು ಕೈಗೊಂಡರು ಎಂದು ತಿಳಿದರೂ - ಅವರು ಬಯಸಿದ ವಾತಾವರಣವು ಅವರಿಗೆ ಉಂಟಾಯಿತು. "ತೆಂಕಣ ಗಾಳಿಯು ಮೆಲ್ಲಗೆ ಬೀಸಲಾಗಿ ತಮ್ಮ ಉದ್ದೇಶವು ಸಾರ್ಥಕವಾಯಿತೆಂದು ಭಾವಿಸಿ ಲಂಗರ ಎತ್ತಿ ಕ್ರೇತ ದ್ವೀಪವನ್ನು ಅನುಸರಿಸಿ ತೀರದ ಮಗ್ಗುಲಲ್ಲೆ ಹೋಗುತ್ತಿದ್ದರು" (ಅಪೊಸ್ತಲರ ಕೃತ್ಯಗಳು 27:13). ಅವಗಡದ ಮೊದಲು ಜೀವಿತವು ನಯನವಾಗಿ ಕಾಣಿಸುತ್ತದೆ.

## "ನಿರೀಕ್ಷೆಯ ... ಅವರನ್ನು ... ಬಿಟ್ಟುಹೋಯಿತು" (27:14-21)

ಅವರು ತಮ್ಮ ಸ್ಥಳವನ್ನು ಸೇರುವ ಕೆಲ ತಾಸುಗಳ ಮೊದಲೇ ಅವಗಡವು ಸಂಭವಿಸಿತು. "ಸ್ವಲ್ಪ ಹೊತ್ತಿನ ಮೇಲೆ ಆ ದ್ವೀಪದ ಮೇಲಣಿಂದ ಈಶಾನ್ಯ ಪೂರ್ವವಾಯು ಎಂಬ ಹುಚ್ಚು ಗಾಳಿಯು ಹೊಡೆಯಿತು" (ವಚನ 14). "ಯೂರಾಕ್ಷಿಲ" ಎಂಬುದು ಒಬ್ಬ ನಾವಿಕನ ನಾಮಾಂಕಿತ, ಈ ಹೆಸರನ್ನು ಆ ಹುಚ್ಚುಗಾಳಿಗೆ ಇಟ್ಟಿದ್ದರು.[39] ಅದನ್ನು ಈಶಾನ್ಯ ವಾಯು ಎಂದು ಕರೆದಿದ್ದರು.[40] ಆ ಗಾಳಿಯು ಕ್ರೇತ ದ್ವೀಪದಿಂದ ಬೀಸುತ್ತಿದ್ದರಿಂದ, ಹಡಗು ತೆರೆದ ಸಮುದ್ರದ ಕಡೆಗೆ ಚಲಿಸುವ ಸಾಧ್ಯತೆಯಿತ್ತು. "ಆ ಹೊಡೆತಕ್ಕೆ ಹಡಗು ಸಿಕ್ಕಿಕೊಂಡು ಗಾಳಿಗೆದುರಾಗಿ ನಿಲ್ಲುವದಕ್ಕೆ ಆಗದೆ ಹೋದದರಿಂದ ಗಾಳಿಗೆ ಆಸ್ಪದ ಕೊಟ್ಟು ನೂಕಿಸಿಕೊಂಡು ಹೋದೆವು" (ವಚನ 15). ಹಡಗು ಗಾಳಿಯನ್ನು ತೆರೆಗಳನ್ನು ಅವಲಂಭಿಸಿಕೊಂಡಿತು.

ದಕ್ಷಿಣದ ಕಡೆಗೆ ಹೊಡೆದುಕೊಂಡ ಹಲವಾರು ತಾಸುಗಳು ಕಳೆದ ನಂತರ "ಕ್ಲೌದವೆಂಬ ಒಂದು ದ್ವೀಪದ ಬಳಿಗೆ ಆಸರೆಗಾಗಿ ಬಂತು" (ವಚನ 16ಎ). ಹಡಗು ಸಹಜ ಸ್ಥಿತಿಗೆ ಬಂತು ಎಂದು ಕ್ಷಣಕಾಲ ತಿಳಿದು, ಹಡಗು ಪುನಃ ಯಾನ ಮಾಡುವಂಥ ಸಿದ್ಧತೆಗಳನ್ನು ಮಾಡಿಕೊಂಡರು. ಅಪಘಾತದಿಂದ ತಪ್ಪಿಸಿಕೊಳ್ಳವದಕ್ಕಾಗಿ ಹಡಗಿನಿಂದ ಇಳಿಸಿದ್ದ ಚಿಕ್ಕ ದೋಣಿಗಳನ್ನು ಪುನಃ ಹಡಗಿಗೆ ಜೋಡಿಸುವದರಲ್ಲಿ ಲೂಕನು ಸಹ ಸಹಾಯ ಮಾಡಿದನು. ಆ ಕಷ್ಟಾನುಭವವನ್ನು ನೆನಪು ಮಾಡಿಕೊಂಡು (ಒಂದು ವೇಳೆ ಬೆರಳುಗಳಿಗೆ ಗುಳ್ಳೆಗಳಾಗಿರಬಹುದು). "ಹಡಗಿನ ದೋಣಿಗಳನ್ನು ಎತ್ತಿ ಭದ್ರಪಡಿಸಿಕೊಳ್ಳುವದು ನಮಗೆ ಪ್ರಯಾಸವಾಯಿತು" (ವಚನ 16ಬಿ).[41]

ಅದನ್ನು ದೋಣಿಯನ್ನು ಮೇಲಕ್ಕೆ ಎತ್ತಿದ ತರುವಾಯ ಹೊರಜಿಗಳನ್ನು ತೆಗೆದುಕೊಂಡು ಹಡಗಿನ ಕೆಳ ಭಾಗವನ್ನು ಬಿಗಿದರು (ವಚನ 17ಎ). "ಹೊರಜಿಗಳನ್ನು" ಹಗ್ಗದಿಂದ, ಅಥವಾ ಸರಪಳಿಗಳಿಂದ ತಯಾರಿಸಿ ಹಡಗಿನ ತಳಭಾಗದ ಕಬ್ಬಿಣಕ್ಕೆ ಬಿಗಿಯುತ್ತಿದ್ದು.[42] "ಆ ಮೇಲೆ ಸುರ್ತಿಸ್ ಎಂಬ ಕಳ್ಳುಸುಬಿನಲ್ಲಿ ಸಿಕ್ಕಿಬಿದ್ದೇವೆಂದು ಭಯಪಟ್ಟು ಹಾಯಿಯನ್ನು ಸಡಿಲಮಾಡಿ ನೂಕಿಸಿಕೊಂಡು ಹೋದೆವು" (ವಚನ 17ಬಿ). ಸರ್ತಿಸ್ ಎಂಬ ಕಳ್ಳುಸುಬು ಉತ್ತರ ಆಫ್ರಿಕದ ಕರಾವಳಿಯಲ್ಲಿರುತ್ತಿತ್ತು. ನಾವಿಕರು ಇದಕ್ಕೆ ಭಯಪಡುತ್ತಿದ್ದರು. ಅವರು ಸೇರಬೇಕಾದ ಸ್ಥಳವು ಅನೇಕ ಮೈಲುಗಳ ದೂರದಲ್ಲಿದ್ದರೂ, ಆ ಬಿರುಗಾಳಿಯಲ್ಲಿ ಹಡಗು ಎಷ್ಟು ದೂರ ಹೋಗಬಹುದೆಂದು ಅವರು ಅರಿತಿದ್ದರು.[43] ಹಡಗಿನ ವೇಗವನ್ನು ತಗ್ಗಿಸಲು, "ಹಾಯಿಯನ್ನು ಸಡಿಲಿಸಿದರು."[44] ಆ ಸಮಯದೊಳಗಾಗಿ ಹಡಗು ಸಂರಕ್ಷಣೆ ಪಡೆಯಲು ಇಳುಕೊಂಡಿದ್ದ ದ್ವೀಪದಿಂದ ದೂರ ಚಲಿಸಿತ್ತು; "ಅವರು ಅಸಹಾಯಕರಾಗಿ, ಹಡಗನ್ನು ನೂಕಿಸಿಕೊಂಡು ಹೋದರು" (ವಚನ 17ಸಿ).

ಆ ಹಳೆಯ ಕಾಲದ ನಾವಿಕರಿಂದ ನಾವುಗಳು ಪಾಠ ಕಲಿಯಲು ಸಾಧ್ಯವಿದೆ: ಬಿರುಗಾಳಿಯು ನಿಮ್ಮ ಜೀವಿತಕ್ಕೆ ಬೀಸುವಾಗ, ಅಪಾಯವನ್ನು ತಗ್ಗಿಸಲು ಸಾಕಷ್ಟು ಪ್ರಯತ್ನ ಮಾಡಬೇಕು, "ಚಿಲಕಗಳನ್ನು ಹಾಕುವದಕ್ಕೆ ಪ್ರಯತ್ನಿಸಬೇಕು"[45] ಹಾಗೂ ಬಿರುಗಾಳಿಯಲ್ಲಿ ನೂಕಿಸಿಕೊಂಡು ಹೋಗಲು ಸಹ ಸಿದ್ಧರಾಗಿರಬೇಕು.

ಬಿರುಗಾಳಿಯು ತನಗೆ ತಾನೆ ಕಡಮೆಯಾಗುವದೆಂದು ತಿಳಿದ ನಾವಿಕರಿಗೆ, ನಿರಾಶೆ ಉಂಟಾಯಿತು, "ಗಾಳಿಯು ಅವರನ್ನು ಮರುದಿನದವರೆಗೆ ಹೊಯ್ದಾಡಿಸಿತು" (ವಚನ 18ಎ). ಆ ಸನ್ನಿವೇಶದಲ್ಲಿ ನೀವಿರುವಂತೆ ಭಾವಿಸಿಕೊಳ್ಳಿರಿ. ಬಿರುಗಾಳಿಯ ಶಬ್ಧ ಮರಗಳು ಉಜ್ಜುತ್ತಿರುವ ಶಬ್ದ ಎಳೆದಾಡುತ್ತಿರುವ ಹಗ್ಗಗಳು ಸುರುಳಿಗೊಂಡ ಮೋಡಗಳನ್ನು ನೋಡುತ್ತಿರುವಿರಿ, ರೌದ್ರಾವೇಶದ ತೆರೆಗಳು ಹಡಗಿಗೆ ಅಪ್ಪಳಿಸುತ್ತಿವೆ. ಭಯಾನಕ ಸಮುದ್ರದಲ್ಲಿ ಹಡಗು ಹೊಯ್ದಾಡುತ್ತಿದೆ. ಆಗ ನಿಮ್ಮ ಪಾದಗಳನ್ನು ಭದ್ರವಾಗಿ ಊರಲು ಯತ್ನಿಸುತ್ತಿರುವಿರಿ. ಉಪ್ಪಾದ ಹವೆಯು ನಿಮ್ಮ ಮುಖಕ್ಕೆ ಬಡಿಯುತ್ತಿದೆ, ಅದರಿಂದ ನಿಮಗೆ ಕಿರುಕುಳವೂ ಆಗಿದೆ. ಬಿರುಗಾಳಿಯು ವೇದನೆಯನ್ನು ಉಂಟುಮಾಡುತ್ತದೆ - ಜೀವಿತದಲ್ಲೂ ಹಾಗೂ ಸಮುದ್ರದಲ್ಲೂ ಇವುಗಳು ಉಂಟಾಗುವ ಸಾಧ್ಯತೆಯಿದೆ.

ಹತಾಶವಾದ ಸಮಯದಲ್ಲಿ ಹತಾಶೆಯ ಕ್ರಮಗಳನ್ನು ಕೈಗೊಳ್ಳಬೇಕು. "ಅವರು ಮುಂದಿನ ... ಸರಕನ್ನು ಬಿಸಾಡುತ್ತಿದ್ದರು" (ವಚನ 18). ಆ ಸರಕಿನ ಮೇಲೆ ಅವರ ಧೈನಂದಿನ ಜೀವಿತ ಅವಲಂಭಿಸಿತ್ತು, ಅವರು ಆಹಾರಕ್ಕಿಂತಲೂ ತಮ್ಮ ಜೀವಿತವನ್ನು ಉಳಿಸಿಕೊಳ್ಳಲು ಯತ್ನಿಸಿದರು. "ಮೂರನೆಯ ದಿನದಲ್ಲಿ ಹಡಗಿನ ಅಡ್ಡ ಮರವನ್ನು ತಮ್ಮ ಕೈಯಿಂದಲೇ ಹೊರಗೆ ಎತ್ತಿ ಹಾಕಿದರು"[46] (ವಚನ 19). ಅವರು ತಮ್ಮ ಹಡಗನ್ನು ಹಗುರ ಮಾಡುವ ಸಲುವಾಗಿ, ಅನಗತ್ಯವಿದ್ದ ಸಕಲ ಸರಕನ್ನು ಸಮುದ್ರಕ್ಕೆ ಬಿಸಾಡುತ್ತಿದ್ದರು.[47]

"ಅನೇಕ ದಿವಸಗಳ ತನಕ ಸೂರ್ಯನಾಗಲಿ ನಕ್ಷತ್ರಗಳಾಗಲಿ ಅವರಿಗೆ ಕಾಣಿಸಲಿಲ್ಲ" ಬರುಗಾಳಿಯು ಮುಂದುರಿದಿತ್ತು (ವಚಮ 20ಎ). ಆದಿಸಗಳಲ್ಲಿ ದಿಕ್ಸೂಚಿ ಇರಲಿಲ್ಲ.

ಅವರು ಇರುವಂಥ ಸ್ಥಳವನ್ನು ಗ್ರಹಿಸಲು ಸೂಚನೆಯ ಉಪಕರಣಗಳಿರಲಿಲ್ಲ. ಹಗಲಿನಲ್ಲಿ ಸೂರ್ಯನನ್ನು ರಾತ್ರಿಯಲ್ಲಿ ನಕ್ಷತ್ರಗಳನ್ನು ಅವಲಂಭಿಸಿ ಯಾನ ಮಾಡುತ್ತಿದ್ದರು. ಆದದರಿಂದ ಅವರು ಇದ್ದಂಥ ಸ್ಥಳವನ್ನು ಅವರು ಅರಿಯಲಿಲ್ಲ. ಅದರೆ ಅವರು ಸುರ್ತಿಸ್ ಎಂಬ ಕಳುಸುಬಿನ ಬಳಿಯಲ್ಲಿದ್ದು, ಯಾವದೇ ಸಂದರ್ಭದಲ್ಲಿ ಬಂಡೆಗಳಿಗೆ ಅಪ್ಪಳಿಸುವ ಸಾಧ್ಯತೆಯಿತು.

ಎರಡು ವಾರಗಳ ಕಾಲ, ಬಿರುಗಾಳಿಯು ಹಡಗನ್ನು ಬಡಿದುಕೊಂಡು ಹೋಗು ತ್ತಿತ್ತು, ಈಗ ಅವರು ಹಾಗೂ ಹಡಗು ಪ್ರತ್ಯೇಕಗೊಳ್ಳುವ ಸಂದರ್ಭವು ಉಂಟಾಗಿತ್ತು, ಲೂಕನು ಬರೆದು, "ಅನೇಕ ದಿವಸಗಳ ತನಕ ಸೂರ್ಯನಾಗಲಿ ನಕ್ಷತ್ರಗಳಾಗಲಿ ನಮಗೆ ಕಾಣಿಸದೆ ದೊಡ್ಡ ಬಿರುಗಾಳಿ ನಮ್ಮ ಮೇಲೆ ಹೊಡೆದ್ದದರಿಂದ ತಪ್ಪಿಸಿಕೊಂಡೇವೆಂಬ ಎಲ್ಲಾ ನಿರೀಕ್ಷೆಯು ಅಂದಿನಿಂದ ಕಳೆದು ಹೋಯಿತು" (ವಚನ 20).

ಇದು ಈ ಕಥೆಯ ದುಃಖಕರವಾದ ಅಂಶವಾಗಿದೆ ಜನರೆಲ್ಲರು ಒದ್ದೆಯಾಗಿ ಚಳಿಹಿಡಿದವ ರಾಗಿದ್ದರು, ಮೂಳೆಗಳು ಕಾಣುವಂತೆ ಆಯಾಸಗೊಂಡು, ಹಸಿವಿನಿಂದ ಬಲಹೀನರಾ ಗಿದ್ದರು. "ಅವರು ಬಹುಕಾಲ ಊಟವಿಲ್ಲದೆ ಇದ್ದರು" (ವಚನ 21ಎ); ಬಿರುಗಾಳಿಯ ನಿಮಿತ್ತ ಹಡಗಿನ ಜನರು ಹಸಿವೆಯನ್ನು ಸಮಯವನ್ನು ಅಡಿಗೆಯನ್ನು ಸಿದ್ಧಪಡಿಸಿ ಊಟಮಾಡುವ ಕ್ರಮವನ್ನು ಮರೆತ್ತಿದ್ದರು[48] ಲೂಕನು ಸಹ ಈ ವೇದನೆಯನ್ನು ಅನುಭವಿಸಿದನೆಂದು ದಾಖಲೆ ಮಾಡಿರುವದನ್ನು ಗಮನಿಸಿ: "*ನಾವು* ಎಲ್ಲಾ ನಿರೀಕ್ಷೆಯು ಅಂದಿನಿಂದ ಕಳೆದುಹೋಯಿತು" (ವಚನ 20; NIV; ಒತ್ತಿ ಹೇಳಿದ್ದು ನನ್ನದು). "ನಾವು" ಎಂಬದರಲ್ಲಿ ಪೌಲನೂ ಸಹ ಒಳಗೊಂಡಿರುವನೇ? ಪ್ರಾಯಶಃ ಇರಬಹುದು ಪೌಲನಿಗೆ ದೇವದೂತನು ಕಾಣಿಸಿಕೊಂಡು - "ಪೌಲನೇ ಭಯಪಡಬೇಡ" ಎಂದು ಎಚ್ಚರಿಸಿದ್ದನು (ವಚನ 24ಎ). ಬಿರುಗಾಳಿಯು ಬಲವಾ ದವರನ್ನು ಸಹ ಬಲಹೀನರಂತೆ ಮಾಡಿತ್ತು.

ನಿಮ್ಮಲ್ಲಿ ಕೆಲವರು ನಿಮ್ಮ ಮದುವೆಯು ಒಡೆದು ಹೋದ ಅನುಭವವನ್ನು ಹೊಂದಿರಬಹುದು, ವೇದನೆಯ ಸಮಯದಲ್ಲಿ ನಿರಾಶೆಯ ಅಂತ್ಯಕ್ಕೆ ಸೇರಿರಬಹುದು, ನಿರಾಶೆಯ ನೀರಿನಲ್ಲಿ ಮುಳುಗಿರಬಹುದು, ಆತ್ಮೀಕವಾಗಿಯೂ, ಮಾನಸಿಕವಾಗಿಯೂ ಭಾವುಕ ರಾಗಿರಬಹುದು. ಬೆಳಕಿಲ್ಲದೆ ದಿನಗಳನ್ನು ಕಳೆಯುವ ಅನುಭವವನ್ನು ನೀವು ತಿಳಿದಿರುವಿರಿ. ನೀವು, ಮೊಣಕಾಲಿನಿಂದ ನೆಡಸಲ್ಪಟ್ಟಿರಬಹುದು.

## ಮುಕ್ತಾಯ

ಈ ವಿಧವಾಗಿ ನಮ್ಮ ಪಾಠವನ್ನು ದುಃಖಕರವಾದ ಹಾಗೂ ಅಪರೂಪದ ಅಂಶದಲ್ಲಿ ಮುಕ್ತಾಯಗೊಳಿಸುವದು ಬೇಸರದ ಸಂಗತಿಯೇ: "ತಪ್ಪಿಸಿಕೊಂಡೇವೆಂಬ ಎಲ್ಲಾ ನಿರೀ ಕ್ಷೆಯು ಕಳೆದು ಹೋಯಿತು" (ವಚನ 20ಸಿ). ತರುವಾಯ ದೇವರು ಅವರನ್ನು ಸಂರಕ್ಷಿಸಿದ ಕುರಿತು ನೋಡೋಣ. ನಾವುಗಳು ನಿರೀಕ್ಷೆಯನ್ನು ಕಳಕೊಂಡವರಾಗಿ, ದಿನೇ ದಿನೇ ನರಳುವ ಸಂಗತಿಯನ್ನು ಈಗ ಯೋಚಿಸಬೇಕಾಗಿದೆ.

ಇಂತಹ ಪರಿಸ್ಥಿತಿಯಲ್ಲಿ, "ಕರ್ತನೆ ಏಕೆ ಹಿಗಾಯಿತು? ಕರ್ತನೇ ಈ ವಿಧವಾದ ಬಿರುಗಾಳಿಯನ್ನು ಏಕೆ ಬರಮಾಡಿದೆ?" ಎಂಬ ಪ್ರಶ್ನೆಯನ್ನು ಕೇಳುತ್ತೇವೆ. ನಮ್ಮ ಕಥೆಯ ಅಂತ್ಯ ಸ್ಥಿತಿಯನ್ನು ಗಮನಿಸಿ, ಪೌಲನು ಬಿರುಗಾಳಿಯಲ್ಲಿ ಏಕೆ ಅಂತ್ಯಗೊಂಡನು ಎಂಬುದಕ್ಕೆ ಉತ್ತರವನ್ನು ಪಡೆಯುತ್ತೇವೆ. ಪೌಲನು ಬಿರುಗಾಳಿಯಲ್ಲಿ ಬದುಕುಳಿದದ್ದರಿಂದ, ಭಕ್ತಿಯಲ್ಲಿ ಬಲಗೊಂಡನು. ದೇವರು ತನ್ನವರನ್ನು ಕಾಪಾಡುವನೆಂಬ ನಿದರ್ಶನವೂ ಇದಾಗಿದೆ. ಮತ್ತು ಅವನು ಹೊಂದಲಾರದ ಒಂದು ಅವಕಾಶವನ್ನು ಪಡಕೊಂಡನು. ಅಲ್ಲಿ ಅವನಲ್ಲಿದ್ದ ಭರವಸದ ನಿದರ್ಶನವನ್ನು ತೋರಿದನು. (ಬಿರುಗಾಳಿಯ ಸಮಯದಲ್ಲಿ ನಿಮ್ಮ ವರ್ತನೆಯನ್ನು ಅನ್ಯರು ನೋಡ ಬಯಸುವರು) 273 ವಿಗ್ರಹರಾಧಿಗೆ ಸತ್ಯದೇವರ ಕುರಿತು ಹೇಳುವಂಥ ಅವಕಾಶವನ್ನು ಪೌಲನು ಪಡೆದನು! ಪ್ರಾಯಶಃ ಅವರು ಅವಗಡದಿಂದ ಪಾರಾದ

ನಂತರ, ಯೇಸುವಿನ ಕುರಿತು ಕೇಳಲು ಆಶಿಸಿರಬಹುದು. ಅಂತ್ಯದಲ್ಲಿ ಪೌಲನಿಗೂ ಮತ್ತು ಇತರರಿಗೂ ಬಿರುಗಾಳಿಯಿಂದ ಲಾಭವುಂಟಾಯಿತು. "ಅಂತ್ಯದಲ್ಲಿ" ಅಂದರೆ ಬಿರುಗಾಳಿಯ ಸಮಯದಲ್ಲಿ ಯಾವುದೇ ಲಾಭವು ದೊರೆಯಲಿಲ್ಲ. ಅವುಗಳು ಸಹಜವಾದವುಗಳಲ್ಲ. ನಾವು ಸಮಸ್ಯೆಗಳನ್ನು ಎದುರಿಸುವಾಗ ಇದರಿಂದ ಯಾವ ಲಾಭ ದೊರೆಯುವುದು ಎಂದು ತಿಳಿಯಲು ಅಸಾಧ್ಯವಾಗುತ್ತದೆ.

ಬಿರುಗಾಳಿಯ ನಿಮಿತ್ತ ನಾವು ಸೋತುಹೋಗುವಾಗ ನಾವೇನು ಮಾಡಲು ಸಾಧ್ಯ? ಪೌಲನಂತೆ ಮಾಡಿರಿ (ವಚನ 24): ಈ ಹಿಂದೆ ಪ್ರಾರ್ಥನೆ ಮಾಡಿದ ಹಾಗೆ ಮಾಡಿರಿ (ಫಿಲಿಪ್ಪಿ 4:6; ಯಾಕೋಬ 5:13) - ಮತ್ತು ಬಿರುಗಾಳಿಯ ಕುರಿತು ನಮಗಿಂತಲೂ ಹೆಚ್ಚಾಗಿ ಅರಿತಿರುವ ದೇವರ ಮೇಲೆ ಭರವಸವಿಡಿರಿ (2 ಕೊರಿಂಥ 1:9, 10; 2 ತಿಮೊಥೆ 1:12).

ದೇವರ ಮೇಲೆ ಭರವಸವಿಟ್ಟ ಒಬ್ಬ ವ್ಯಕ್ತಿಯ ಕಥೆಯನ್ನು ನಾನು ಹೇಳಲು ಬಯಸುತ್ತೇನೆ. 1873ರಲ್ಲಿ, ಚಿಕಾಗೋದ ಹೊರೇಷಿಯೋ ಸ್ಪಾಫೋರ್ಡ್ ಎಂಬವನು ತನ್ನ ಕುಟುಂಬದವರನ್ನು ರಜೆಯಲ್ಲಿ ಯುರೋಪಿಗೆ ಕರೆದೊಯ್ಯಲು ನಿರ್ಧರಿಸಿದನು. ಅವನು ಫ್ರೆಂಚನ ಒಂದು ಹಡಗಿನಲ್ಲಿ ಪ್ರಯಾಣಮಾಡಲು ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸಿದ್ದನು, ಆದರೆ ಕೊನೆಯ ಕ್ಷಣಗಳಲ್ಲಿ ವ್ಯವಹಾರದ ನಿಮಿತ್ತ ಅವನುಪ್ರಯಾಣಮಾಡಲು ಸಾಧ್ಯವಾಗಲಿಲ್ಲ. ಅವನು ತನ್ನ ಹೆಂಡತಿ ಹಾಗೂ ನಾಲ್ಕು ಜನ ಹೆಣ್ಣು ಮಕ್ಕಳನ್ನು ಹಡಗಿನಲ್ಲಿ ಕಳುಹಿಸಿ, ಅವನು ನಂತರ ಅವನು ಅವರನ್ನು ಯೂರೋಪಿನಲ್ಲಿ ಸೇರಿಕೊಳ್ಳುವನೆಂದು ಹೇಳಿದನು. ನವಂಬರ್ 22ರಂದು ಅವರು ಪ್ರಯಾಣಿಸುತ್ತಿದ್ದ ಹಡಗು ಇನ್ನೊಂದು ಹಡಗಿಗೆ ಬಡಿಯಿತು. 12 ನಿಮಿಷದೊಳಗಾಗಿ ಹಡಗು ನೀರಿನ ತಳವನ್ನು ಸೇರಿತು. ಅದರಲ್ಲಿದ್ದ 226 ಜನರು ಅಸುನೀಗಿದ್ದರು, ಅದರಲ್ಲಿ ಸ್ಪಾಫೋರ್ಡಿನ ನಾಲ್ಕು ಹೆಣ್ಣು ಮರಣಹೊಂದಿದ್ದರು. 9 ದಿನಗಳ ನಂತರ ಅವನ ಹೆಂಡತಿ "ತಾನು ಮಾತ್ರ" ಬದುಕುಳಿದಿರುವದಾಗಿ ತಂತಿ ಸಂದೇಶ ವನ್ನು ಕಳುಹಿಸಿದಳು. ಅವನು ಇಂಗ್ಲೇಂಡಿನಲ್ಲಿದ್ದ ತನ್ನ ಹೆಂಡತಿಯನ್ನು ಸೇರಿಸಿ ಕೊಳ್ಳಲು ತಕ್ಷಣವೇ ಇನ್ನೊಂದು ಹಡಗಿಗೆ ಮುಂಗಡ ಕಾಯ್ದಿರಿಸಿದನು. ಒಂದು ರಾತ್ರಿ ಹಡಗಿನ ಯಜಮಾನನು ಇವನನ್ನು ತನ್ನ ಕೋಣೆಗೆ ಕರೆ ಕಳುಹಿಸಿದನು. "ನಿನ್ನ ನಾಲ್ಕು ಜನ ಹೆಣ್ಣುಮಕ್ಕಳು ಮುಳುಗಿಹೋದ ಸ್ಥಳದಲ್ಲಿ ನಾವೀಗ ಇರುವೆವೆಂದು ಹಡಗಿನ ಯಜಮಾನನ್ನು ಹೇಳಿದನು." ನಂತರ ಸ್ಪಾಫೋರ್ಡ್ ತನ್ನ ಕೋಣೆಗೆ ಹಿಂದಿರುಗಿದನು. "ಆ ಕಾರ್ಗತ್ತಲಿನ ಕಣಿವೆಯಲ್ಲಿ" ಅವನು ಇರುವಾಗ ಬರೆದಂತ ಈ ಹಾಡು ನಮಗೆ ಇಪ್ಪತ್ತು ವರ್ಷಗಳ ಕಾಲ ಸಂತೈಸುವಿಕೆಯನ್ನು ನೀಡಿತು:

> ಶಾಂತಿಯ ನದಿಯು ನನ್ನ ಮಾರ್ಗದಲ್ಲಿ ಬರುವಾಗ,
> ದುಃಖದ ಸಮುದ್ರವು ನನ್ನ ಕೆಳಗೆ ಇರುವಾಗ;
> ನನ್ನ ಸ್ಥಿತಿ ಏನೇ ಇದ್ದರೂ, ನೀನು ನನಗೆ,
> "ಆತ್ಮಕ್ಕೆ ಸುಖ, ಆತ್ಮಕ್ಕೆ ಸುಖ ಎಂದು ಕಲಿಸುವಿರಿಯಲ್ಲವೇ."[49]

"ದುಃಖದ ಸಮುದ್ರವನ್ನು ದಾಟುವಾಗ ನಿನ್ನ ಪರಿಸ್ಥಿತಿಯು ಹೇಗೆ ಇರಲಿ" ಇದು ನನ್ನ ಆತ್ಮಕ್ಕೆ ಸುಖ ಎಂದು ಹೇಳುವಂತೆ ನಾನು ಪ್ರಾರ್ಥಿಸುತ್ತೇನೆ.[50]

## ದೃಶ್ಯ ಸಂಬಂಧವಾದ – ಟಿಪ್ಪಣಿ

ನಕ್ಷೆಯ ಬಹಳ ಉಪಯೋಗವಾಗುತ್ತದೆ. ಪೌಲನ ರೋಮಾಯದ ಪ್ರಯಾಣದ ಕುರಿತು ಚಾಕ್ ಬೋರ್ಡಿನಲ್ಲಿ, ವಿಸ್ತರಣೆ ಮಾಡಿದ ನಕ್ಷೆಯನ್ನು ತೋರಿಸಿರಿ.

ಟಿಪ್ಪಣಿಗಳು

[1]ಪೌಲನ ರೋಮಾಪುರದ ಪ್ರಯಾಣದ ನಕ್ಷೆಯನ್ನು ಹಿಡಿದು ಪಾಠವನ್ನು ಅಭ್ಯಾಸಿಸಿರಿ. [2]ದೇವರು ಸೃಷ್ಟಿಯ ದೇವರು ಎಂದು ವಾಕ್ಯಗಳು ಹೇಳುವದರಿಂದ, ಸೈತಾನನು ಸಹ ಅದರಲ್ಲಿ ಪಾಲು ತೆಗೆದುಕೊಂಡ ಕುರಿತು ಚರ್ಚಿಸಿ, ಯೋಬನ ಪ್ರಕಾರ ಸ್ವಭಾವಿಕವಾದ ವಿಕೋಪಗಳ ಮೂಲಕ ದೇವರು ನಮ್ಮನ್ನು ಉತ್ತಮರನ್ನಾಗಿ ಮಾಡುವನು, ಆದರೆ ಸೈತಾನನು ಅದನ್ನು ಬಳಸಿ ನಾಶಮಾಡುವನು. ಅಧ್ಯಾಯ 27ರಲ್ಲಿ, 1 ಕೊರಿಂಥ 10:13ರ ಮುಖ್ಯಾಂಶವನ್ನು ನೋಡುತ್ತೇವೆ (ಯೋಬನ ಪುಸ್ತಕದಲ್ಲೂ), ದೇವರು ಸೈತಾನನನ್ನು ಮಿತಿಗೊಳಿಸುವನು ದೇವರು ತಪ್ಪಿಸಿಕೊಳ್ಳುವ ಮಾರ್ಗವನ್ನು ತೋರಿಸುವನು, ಅದನ್ನು ನಾವು ಸ್ವೀಕರಿಸಬಹುದು ಅಥವಾ ನಿರಾಕರಿಸಬಹುದು. [3]1600ರ ಜಾನ್ ಬುನ್ಯನ್ನರ ಕೃತಿ, ನಾಶನದ ಪಟ್ಟಣದಿಂದ, ವೈಭವದ ಪಟ್ಟಣಕ್ಕೆ ಹೋಗುವ ಪ್ರಯಾಣದ ಕುರಿತಾಗಿರುತ್ತದೆ. [4]ಜೀವಿತಕ್ಕೆ ಹೋಲಿಕೆಯನ್ನು ತಿಳಿಸಿರುವೆನು. ಅದು ನೇರವಾಗಿ ಕೇಳುಗರಿಗೆ ಸಂಬಂಧ್ಧವು ಪಟ್ಟಿದೆ. [5]ಕ್ರಿ.ಶ. 59 "ಕ್ರಮಾಂಕಕ್ಕೂ," ಉಪವಾಸಕ್ಕೂ ಸಂಬಂಧ ಪಟ್ಟಿದೆ ವರ್ಷಾಂತದಲ್ಲಿ ಪ್ರಯಾಣಿಸುವದು ಅಪಾಯಕಾರಿಯಾಗಿತ್ತು. ವಚನ 9ರ ಟಿಪ್ಪಣಿ ನೋಡಿರಿ, ಆಗಸ್ಟ್ ತಿಂಗಳನ್ನು ತಿಳಿಸಲಾಗಿದೆ. [6]ನೂರು ಸಿಪಾಯಿಗಳ ನಾಯಕನಿಗೆ ಶತಾಧಿಪತಿ ಎನ್ನುವರು (ಇಲ್ಲಿ ಅನೇಕರು ಪ್ರಯಾಣ ಮಾಡಿದ್ದರು). ಪಟಾಲಮ - ಅಂದರೆ 600 ರಿಂದ 1000 ಜನರು, 10:1ಕ್ಕೆ ಹೋಲಿಸಿ. [7]ಲೂಕ ಮತ್ತು ಅರಿಸ್ತಾರ್ಕರು ಪ್ರಯಾಣಿಸಿದ ಕುರಿತ ಪಂಡಿತರಲ್ಲಿ ಕರ್ತವಿದೆ, ಅವರು ಪೌಲನ ದಾಸರಾಗಿ ಹೋಗಿರಬಹುದು, ಅಥವಾ ಲೂಕನು ಪೌಲನ ವೈದ್ಯನಾಗಿ ಹೋಗಿರಬಹುದು. ಅವರು ಪ್ರಯಾಣಿಕರ ಚೀಟಿಯನ್ನು ಪಡೆದು ಸರಕಿನ ಹಡಗಿನಲ್ಲಿ ಹೋಗಿರಬಹುದು (21:3). ನಂತರ ಶತಾಧಿಪತಿಯು ಜನರನ್ನು ಪ್ರಯಾಣಿಕರ ಹಡಗಿಗೆ ಸಾಗಿಸಿದನು (27:6; 28:11) (27:37). [8]ಪೌಲನಿಗೆ ಜೊತೆ ಸೇರೆಯವನಾದವನು ಅರಿಸ್ತಾರ್ಕನಾಗಿರಬಹುದೇ (ಕೊಲೊಸ್ಸೆ 4:10); ಅವನನ್ನುಹಿಡಿದು ಕೈಸರನಲ್ಲಿಗೆ ಕಳುಹಿಸಿರಬಹುದು (ಫಿಲೆಮೋನ 24 ಇದೇ ಸಮಯದಲ್ಲಿ ಬರೆ ದದ್ದು). [9]ಗ್ರೀಕ್‌ನ "ಹೆಟ್ರೊ" ಅಂದರೆ "ಒಂದೇಜಾತಿಯ" ಎಂಬ ಅರ್ಥ. [10]ಸಿಪಾಯಿಗಳು ಮಾಡಿದ ನಿರ್ಧಾರಕ್ಕಾಗಿ ವಚನ 42ರ ಮಂದಿನ ಪಾಠ ನೋಡಿರಿ.

[11]ಜಾನ್ ಪಾಲಕ್ ಯೂಲ್ಯನು ಸಹ ಶತಾಧಿಪತಿಯೇ ಹಡಗಿನಲ್ಲಿ ಅಧಿಕಾರವನ್ನು ಹೊಂದಿದವನು. [12]ಅಗ್ರಿಪ್ಪನು ಬಹುಶಃ ಕೈಸರೈಯಲ್ಲೆ ಇರಬಹುದು. [13]ಅವರು ಕೈಸರೈಯಿಂದ ಪ್ರದಾನ ಪಟ್ಟಣವಾದ ಪಾಲಿಸ್ತೇನಿಗೆ ಹೋಗಿರಬಹುದು, ಎರಡು ವರ್ಷಗಳ ಕಾಲ ಸೆರೆವಾಸವನ್ನು ಅಲ್ಲಿ ಹೊಂದಿರಬಹುದು. [14]ಅದಿಮಿತ್ರಿಯು ಆಸ್ಯ ಸೀಮೆಯಲ್ಲಿತ್ತು. ಅದು ಕರಾವಳಿಯ ಹಡಗಾಗಿದ್ದು, ತನ್ನ ಊರಿಗೆ ತೆರಳುತ್ತಿರಬಹುದು. [15]ಪೌಲನು ಲೂಕನಿಂದ ಶುಶ್ರೂಷ್ರೇ ಪಡೆದಿರಬಹದು. [16]ಇನ್ನೊಂದು ಸಾರಿ ಕ್ರೈಸ್ತರ ದಯೆಯ ಕುರಿತು ನೋಡುತ್ತೇವೆ. ಸಿದೋನಿನಲ್ಲಿ ಸಭೆಯು ಸ್ಥಾಪನೆಗೊಂಡಿರಬಹದು, ಯಾಕೆಂದರೆ ಪೌಲನು ತಾನೇ ಯೆರೂಸಲೇಮಿನಿಂದ ಕ್ರೈಸ್ತರನ್ನು ಹೊರಡಿಸಿ ಬಿಟ್ಟಿದ್ದನು (8:1-4; 11:19). ಈ ಪುಸ್ತಕದ ಮೊದಲ ಪಾಠವನ್ನು ನೋಡಿರಿ. [17]"ಪ್ರಯಾಣಿಸಿದೆವು" (KJV) "ಲೀ" ಅಂದರೆ ಗಾಳಿಯಿಂದ ಸುರಕ್ಷೆ. [18]ಎರಡು ವರ್ಷಗಳ ಹಿಂದೆಯೆರೂಸಲೇಮಿಗೆ ಹಿಂದಿರುಗುವಾಗ ಪೌಲನು ಮೆಡಟೇರೇನಿಯನ್ ಸಮುದ್ರದಲ್ಲಿ ಕ್ಷೇಮವಾದ ಯಾನ ಮಾಡಿದ್ದನು (ಅಪೊಸ್ತಲರ ಕೃತ್ಯಳು 21:2-4 ಟಿಪ್ಪಣಿ ನೋಡಿರಿ) ಈಗ ಗಾಳಿಯು ಅವರಿಗೆ ವಿರುದ್ಧವಾಗಿ ಬೀಸುತ್ತಿತ್ತು. [19]ಕರಾವಳಿಯಲ್ಲಿ ವ್ಯಾಪಾರ ಮಾಡಿರಬಹುದು. [20]ಸೀದೋನಿನಿಂದ ಮುರ್ರಕ್ಕೆ 15 ದಿವಸಗಳ ಪ್ರಯಾಣ - ವೆಸ್ಟರ್ನ್ ಟೆಕ್ಸ್ಟ್‌ನಲ್ಲಿ 14 ದಿವಸ.

[21]ಪ್ರಯಾಣಕ್ಕೆ ಗಾಳಿಯು ವಿರುದ್ಧವಾಗಿದ್ದರಿಂದ, ಅವರು ಉತ್ತರದ ಮುರ್ರಕ್ಕೆ ಹೋಗಿ ನಂತರ ಇತಾಲ್ಯಕ್ಕೆ ಹೋದರು. [22]ಹಡಗು ಈಜಿಪ್ಟಿನ ಅಲೆಕ್ಸಾಂಡ್ರಿಯಕ್ಕೆ ಸೇರಿತ್ತು. ಈಜಿಪ್ಟಿನಿಂದ ದವಸವು ರೋಮಾಯಕ್ಕೆ ಸರಬರಾಜಾಗುತ್ತಿತ್ತು 28:11ರಲ್ಲಿ ಮತ್ತೊಂದು ಅಲೆಕ್ಸಾಂಡ್ರಿಯದ ಹಡಗನ್ನು ಗಮನಿಸುತ್ತೇವೆ. [23]ಪುರಾತನ ಹೇಳಿಕೆಯ ಪ್ರಕಾರ ಹಡಗು 180 ಅಡಿ ಆಳ, 45 ಅಡಿ ಎತ್ತರ 43 ಅಡಿ ಉದ್ದಗಳ ಅಳತೆ ಹೊಂದಿತ್ತು. ಸರಕಿನ ಸಂಗಡ ಪ್ರಯಾಣಿಕರನ್ನು ಸಾಗಿಸುವ ಇನ್ನೊಂದು ದೊಡ್ಡ ಹಡಗಿನ ಕುರಿತ ಯೋಸೋಫಸನು ಸಹ ತಿಳಿಸಿರುವನು. [24]ಕೆಲವು ಬರವಣಿಗೆಯಲ್ಲಿ 76, ಎಂದಿದ್ದರೆ, ಪ್ರಮುಖ ಬರವಣಿಗೆಗಳಲ್ಲಿ 276 ಎಂದಿದೆ. [25]ಮುರ್ರದಿಂದ ಕ್ನಿಡ್ಲೆಸ್‌ಗೆ 170 ಮೈಲುಗಳು 10ರಿಂದ 15 ದಿವಸಗಳು. [26]ಪಂಚಾಶತ್ತಮದ ದಿನದಂದು ಕ್ಷೇತ್ರದವರೂ ಹಾಜರಿದ್ದರು (ಅಪೊಸ್ತಲರ ಕೃತ್ಯಗಳು 2:11); ಅವರಲ್ಲಿ ಕೆಲವರು ಕ್ರೈಸ್ತರಾಗಿರಬಹುದು. ತರುವಾಯ ಪೌಲನು ಕ್ಷೇತ್ರದಲ್ಲಿ ಸೇವೆ ಮಾಡಿದನು (ತೀತ 1:5). ಸತ್ಯವೇದದ ಸಮಯದಲ್ಲಿ ಹೆಚ್ಚು ವರ್ಚಸ್ಸನು ಹೊಂದಿರಲಿಲ್ಲ (ತೀತ 1:12). [27]ಪ್ರಯಾಣಿಸಿದೆವು ಎಂಬ ಗ್ರೀಕ್ ಹೇಳಿಕೆ. [28]ಫೇರ್ ಹೆವನ್ ಎಂಬವನು ಇಷ್ಟಪಡುತ್ತೇನೆ, ಬಿರುಗಾಳಿಯ ಸಮಯದಲ್ಲಿ ತಾತ್ಕಾಲಿಕ ಆಶ್ರಯ. [29]ಕಾಯುವ ಸಮಯ. [30]ವಚನ 20ರ ಟಿಪ್ಪಣಿ ನೋಡಿರಿ.

[31]ಉಪವಾಸ ದಿವಸಗಳು ಮುಗಿದಿದ್ದವು ಕ್ರಿ.ಶ. 59ರಲ್ಲಿ ಚಂದ್ರನ ಮೂಲಕ ಸಮಯವನ್ನು

ನಿರ್ದರಿಸುತ್ತಿದ್ದರು. ಹಬ್ಬದ ದಿವಸವು ಮೊದಲೇ ಬಂದಿತ್ತು. [32]"ಮುಖ್ಯಸ್ಥನು" ಅಂದರೆ ಹಡಗಿನ ಯಜಮಾನ. [33]ಅವನು ಹೇಗೆ ಕೇಳಿದನೆಂದು ತಿಳಿದಿರುವದಿಲ್ಲ. [34]William Barclay, *The Acts of the Apostles*, The Daily Study Bible Series, rev. ed. (Philadelphia: Westminster Press, 1976), 182. [35]ಮೂರು ವಿಮಾನ ಅಪಘಾತದಲ್ಲಿ ನಾನಿದದ್ದಕ್ಕೆ ನಂತರದ ವಿಮಾನದಲ್ಲಿ ಪ್ರಯಾಣಿ ಸುತ್ತಿರಲಿಲ್ಲ. [36]ಒಂದು ಸಂದರ್ಭದಲ್ಲಿ ಅವಗಡದ ಕುರಿತು ದೇವರೇ ತಿಳಿಸಿದ್ದನು, ಪ್ರಾರ್ಥನೆಯ ನಿಮಿತ್ತ ಅದು ಪರಿಹಾರವಾಯಿತು (ಉದಾಹರಣೆ 14:11-24). [37]ಬಹು ಪಾಲು ಜನರು ಸಮ್ಮೆಳನದಲ್ಲಿದ್ದರೋ ಅಥವಾ ಹಡಗಿನಲ್ಲಿದ್ದರೋ? (ವಚನ 21). ಫೋಯಿನಿಕ್ಸ್‌ಗೆ ಹೋಗುವ ಕುರಿತು ಬಹುಮತವನ್ನು ಪಡೆದು ಪ್ರಯಾಣಿಸಿರಬಹುದು. [38]ಆ ರೇವು ಬಿರುಗಾಳಿಯಿಂದ ಸಂರಕ್ಷಿತವಾಗಿತ್ತು ಎಂದು ಲೂಕನು ದಾಖಲಿಸಿರುವನು. [39]"ಛೀಕ" ಎಂಬ ಗ್ರೀಕ್ ಪದದ ಅರ್ಥ "ಬಿರುಗಾಳಿ" ಎಂಬದೆ. [40]"ಯೂರೋಕ್ಷಿಲ" ಅಂದರೆ ಗ್ರೀಕ್‌ನ "ಪೂರ್ವಗಾಳಿ" ಲ್ಯಾಟಿನ್‌ನಲ್ಲಿ "ಉತ್ತರದಗಾಳಿ" ಎಂಬ ಜೋಡಿ ಪದ.

[41]ಚಿಕ್ಕ ದೋಣಿಯನ್ನು ಸಮುದ್ರದಲ್ಲಿ ಬಿಟ್ಟರೆ ಅದು ನಾಶವಾಗುವ ಸಾಧ್ಯತೆಯಿದೆ, ನಂತರ ಅವರ ಸಹಾಯದ ಅಗತ್ಯತೆ ಇರುತ್ತದೆ. [42]ಆ ಹಗ್ಗಗಳನ್ನು ಎಲ್ಲಿಗೆ ಬಿಗಿದಿದ್ದರು ಎಂಬ ಸ್ಪಷ್ಟತೆ ಇರುವದಿಲ್ಲ. [43]ಅವರು ಭೂಮಿಯನ್ನು ಸೇರುವ ಮೊದಲು 500 ಮೈಲುಗಳ ಅಂತರವನ್ನು ನೂಕಿಸಿ ಕೊಂಡು ಹೋಗಿದ್ದರು. [44]ಸಮುದ್ರದಲ್ಲಿ ಹಡಗಿನ ತಡೆಗೆ, ನಾವಿಕರು ಮುಖ್ಯ ಹಾಯಿಯನ್ನು ಕೆಳಗಿಳಿಸಿರಬಹುದು. [45]ಹಡಗಿನ ಸಂರಕ್ಷಣೆಯ ಹೇಳಿಕೆಯ ಪದಗಳು. [46]"ನಮ್ಮ ಸ್ವಂತ ಕೈಗಳಿಂದ" ಎಂಬ ಹೇಳಿಕೆಯು ಕೆಲವು ಬರವಣಿಗೆಗಳಲ್ಲಿದೆ. [47]ಮನೆಯ ಪೀಠೋಪಕರಣಗಳಿಗೆ ಬಳಸಿರುವ ಪದ "ಟ್ಯಾಕಲ್" (ಮತ್ತಾಯ 12:29; ಮಾರ್ಕ 3:27) ಅವರು ಪೀಠೋಪಕರಣಗಳನ್ನು ಸಮುದ್ರದಲ್ಲಿ ಎಸೆದಿರಬಹುದು. [48]Orrin Root, ed., *Standard Bible Commentary: Acts* (Cincinnati, Ohio: Standard Publishing Co., 1966), 196. [49]H. G. Spafford, "It Is Well With My Soul." Reproduced by permission from ACU Press, Abilene, Texas. [50]ಈ ಪಾಠವನ್ನು ಪ್ರಸಂಗ ರೂಪದಲ್ಲಿ ಬಳಸುವುದಾದರೆ ವಿಶ್ವಾಸರಿಗೂ ಅವಿಶ್ವಾಸರಿಗೂ ಕಷ್ಟಗಳು ಒಂದೇ ರೀತಿಯಲ್ಲಿ ಬರುವವು ಎಂದು ಒತ್ತಿ ಹೇಳಬೇಕು. ಬಿರುಗಾಳಿಯಂತ ಕಷ್ಟಗಳಿಗೆ ವಿಶ್ವಾಸರುಗಳಿಗೆ ತಪ್ಪಿಸಿಕೊಳ್ಳಲು ಉಪಾಯಗಳು ಇರುವುದಿಲ್ಲ, ಆದರೆ ವಿಶ್ವಾಸಿಗಳಿಗೆ ಉಪಾಯಗಳು ಇರುವವೆಂದು ಅವರು ನಂಬಿದರೆ ಓದುಗರನ್ನು ಕ್ರೈಸ್ತರಾಗಲು ಪ್ರೋತ್ಸಾಹಿಸಿಬಹುದು.